# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.262/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಸುಮಿತ್ರಮ್ಮ | CW: 1 | PW: 1 |
| ಗಂಡನ ಹೆಸರು | : | ಮಂಜುನಾಥ | | |
| ವಯಸ್ಸು | : | 45 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಹಡವನಹಳ್ಳಿ | | |

ದಿನಾಂಕಃ 06.08.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ - ಮಾನ್ಯ ಸ.ಸ.ಅ.ರವರಿಂದಃ-

ಆರೋಪಿ ಗೊತ್ತು. ಚಾಸಾ 4 ನನ್ನ ತಂಗಿ, ಚಾಸಾ 8 ರವರು ಚಾಸಾ 4 ರವರ ಮಗ. ಚಾಸಾ 2, 3, 5 ರಿಂದ 7 ರವರು ಗೊತ್ತು.

ದಿಃ 19.12.2019 ರಂದು ನಾನು ನನ್ನ ತಂದೆಯನ್ನು ನೋಡಲು ನಮ್ಮ ತವರು ಮನೆ ಮಲ್ಲಿಗೇನಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ನಮ್ಮ ತಂದೆಯನ್ನು ಆಸ್ಪತ್ರೆಗೆ ನಾಳೆ ಕರೆದುಕೊಂಡು ಹೋಗೋಣ ಮನೆಯಲ್ಲೇ ಇರು ಎಂದು ಚಾಸಾ 6 ರವರು ಹೇಳಿದ್ದು ಅದರಂತೆ ನಾನು ತವರು ಮನೆಯಲ್ಲಿ ಉಳಿದುಕೊಂಡಿದ್ದೆ. ದಿಃ 20.12.2019 ರಂದು ನಾನು, ನನ್ನ ತಮ್ಮ, ಚಾಸಾ 6 ಮತ್ತು ನನ್ನ ತಂದೆ ಚಾಸಾ 7 ರವರು, ನನ್ನ ತಂಗಿ ಚಾಸಾ 4 ಹಾಗೂ ಅವರ ಮಗ ಚಾಸಾ 8 ರವರು ರಾತ್ರಿ 7.30 ರ ಸಮಯದಲ್ಲಿ ನನ್ನ ತಂದೆಯ ಮನೆಯಲ್ಲಿ ಇದ್ದಾಗ ಆರೋಪಿಯು ತನ್ನ ಮಗಳನ್ನು ಬಿಡಲು ಬಂದಾಗ ನನ್ನನ್ನು ಹಿಡಿದು ಕಪಾಳಕ್ಕೆ ಹೊಡೆದು, ನನ್ನ ಗಲ್ಲಕ್ಕೆ ಗುದ್ದಿದರು. ನಾನು ನೆಲದ ಮೇಲೆ ಬಿದ್ದಾಗ ನನ್ನ ತೊಡೆಗೆ ಹೊಡೆದರು. ನಾನು ಚೀರಿಕೊಂಡಾಗ ಚಾಸಾ 7 ರವರು ನನ್ನ ಬಳಿ ಬಂದು ಅವರ ತಾಯಿ ಚಾಸಾ 4 ರವರನ್ನು ಕರೆದುಕೊಂಡು ಬಂದರು. ನಾನು ಮತ್ತು ಚಾಸಾ 4 ರವರು ಹೊನ್ನಾಳಿ ಸಾರ್ವಜನಿಕ

ಆಸ್ಪತ್ರೆಗೆ ಹೋಗಿ ನನ್ನನ್ನು ಆಸ್ಪತ್ರೆಯಲ್ಲಿ ಸೇರಿಸಿದರು. ದಿಃ 22.12.2019 ರಂದು ನನ್ನಿಂದ ಪೋಲೀಸರು ಹೇಳಿಕೆ ಪಡೆದುಕೊಂಡರು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದೂರು /ಹೇಳಿಕೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿದ್ದು ದೂರು/ಹೇಳಿಕೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ಗಲಾಟೆಯಲ್ಲಿ ಆರೋಪಿಯು ನಾನು ಉಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿರುತ್ತಾರೆ ಎಂದರೆ ಸರಿ. ಆರೋಪಿಯು ನನ್ನ ತಲೆಕೂದಲು ಹಿಡಿದು ಎಳೆದಾಡಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ನಾನು ಆರೋಪಿ ಯಿಂದ ತಪ್ಪಿಸಿಕೊಂಡು ಹೊರಗಡೆ ಬಂದಾಗ ಚಾಸಾ 4 ರವರು ಬಂದಿದ್ದನ್ನು ನೋಡಿ ಆರೋಪಿಯು ನನ್ನ ನೈಟಿಯನ್ನು ಬಿಟ್ಟಿರುತ್ತಾರೆ ಎಂದರೆ ಸರಿ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದಬೈದು , ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ಹೊರತುಪಡಿಸಿ ನ್ಯಾಯಾಲಯದಲ್ಲೂ ಸಹ ಒಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಹಲ್ಲೆಯ ಸಮಯದಲ್ಲಿ ನಾನು ಉಟ್ಟಿದ್ದ ನೈಟಿಯನ್ನು ದಿಃ 06.01.2020 ರಂದು ನಾನು ನ್ಯಾಮತಿ ಪೋಲೀಸ್ ಠಾಣೆಗೆ ಹೋಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 3 ಮತ್ತು 7 ರವರು ಹಾಜರಿದ್ದರು ಎಂದರೆ ಸರಿ. ಸದರಿ ನೈಟಿಯನ್ನು ಪೊಲೀಸರು ನಮ್ಮಗಳ ಮುಂದೆ ವಶಪಡಿಸಿಕೊಂಡರು ಎಂದರೆ ಸರಿ. ಸದರಿ ಅಮಾನತ್ತು ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 10.30 ರ ಸಮಯದಲ್ಲಿ ಜರುಗಿಸಿ, ಫೋಟೋಗಳನ್ನು ತೆಗೆದು ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ನೈಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ 1 ಎಂದು ಗುರುತಿಸಲಾಯಿತು.

ಸಾಕ್ಷಿಯು ಅಮಾನತ್ತುಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿದ್ದು ಅಮಾನತ್ತುಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು, 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಪೋಟೋಗಳನ್ನು ನಿಪಿ 3 ರಿಂದ 4 ಎಂದು, ಸಿಡಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಸಾಕ್ಷಿಯು 164 ಹೇಳಿಕೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು 164 ಹೇಳಿಕೆಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಸ್‌ಕೆ ವಕೀಲರಿಂದಃ-</u>

ನಮ್ಮ ಮತ್ತು ಚಾಸಾ 1 ರವರ ಮಗಳ ಮಧ್ಯೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಸದರಿ ದಾವೆಯನ್ನು ನಾವೇ ಹಾಕಿರುತ್ತೇವೆ ಎಂದರೆ ಸರಿ. ದಾವಾ ಹಾಕುವ ಕಾಲಕ್ಕೆ ಚಾಸಾ 1 ರವರ ಮೊಮ್ಮಕ್ಕಳನ್ನು ನಾವು ಆ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸರಿ. ನಂತರ ಚಾಸಾ 1 ರವರ ಮೊಮ್ಮಕ್ಕಳು ಸದರಿ ಸಿವಿಲ್ ದಾವೆಯಲ್ಲಿ ಸೇರ್ಪಡೆಯಾಗಿರುತ್ತಾರೆ. ಚಾಸಾ 1 ರವರ ಮೊಮ್ಮಕ್ಕಳ ಹಿಸ್ಸೆಯನ್ನು ತಪ್ಪಿಸುವ ಉದ್ದೇಶದಿಂದ ದಾವಾ ನಡೆಯುತ್ತಿದ್ದಾಗಲೇ ನಾವು ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.